ಮುತ್ತ ಇದ್ದವರೆಲ್ಲಾ ಸಿಖ್ಖರೇ. ಎಳವೆಯಲ್ಲೇ ಉದ್ದ ಕೂದಲು ಬಿಟ್ಟು ಟರ್ಬನ್ ಸುತ್ತಿಕೊಳ್ಳುತ್ತಿದ್ದೆ. ಅಕ್ಕ ಪಕ್ಕದವರಿಂದ ಸರಾಗವಾಗಿ ಪಂಜಾಬಿ ಕಲಿತೆ. ಗುರುಗ್ರಂಥ ಸಾಹಿಬಾವನ್ನು ಆಸಕ್ತಿಯಿಂದ ಓದಿದೆ. ನನ್ನ ನಿಜವಾದ ಹೆಸರು ವಿಜೇಂದ್ರನಾಥ ಸೋನಿಪತ್. ಆದರೆ, ಜನ ನನ್ನನ್ನು ವಿಜೇಂದ್ರನಾಥ್ ಸಿಂಗ್ ಎಂದು ಕರೆಯತೊಡಗಿದರು. ಬಿ.ಎ. ಮಾಡಿ ಲಾ ಓದಿದೆ. ಆ ದಿನಗಳಲ್ಲಿ ನನ್ನನ್ನು ಬ್ರಿಟನ್ನು ತುಂಬಾ ಆಕರ್ಷಿಸಿತು. ಟರ್ಬನ್ ಸುತ್ತಿಕೊಂಡೇ ಲಂಡನ್ನಿಗೆ ಹಾರಿದೆ. ಅಲ್ಲಿ ದೊಡ್ಡದೊಂದು ಗುರುದ್ವಾರವಿದೆ. ವಸತಿ ಊಟದ ವ್ಯವಸ್ಥೆ ಇಲ್ಲದ ಸಿಖ್ಖರಿಗೆ ಅಲ್ಲಿ ಮುಕ್ತ ಪ್ರವೇಶವಿದೆ. ನನ್ನ ಆರಂಭದ ದಿನಗಳು ಅಲ್ಲಿ ಹಾಗೆ ಕಳೆದು ಹೋದವು. ಈ ನಡುವೆ ಸಿಖ್ ಹಿರಿತಲೆಗಳ ಪರಿಚಯವಾಗಿ ವಿಶ್ವಪ್ರಯತ್ನ ಮಾಡಿ ಬ್ರಿಟಿಷ್ ಕಸ್ಟಮ್ಸ್‌ನಲ್ಲಿ ಕೆಲಸ ಗಿಟ್ಟಿಸಿಕೊಂಡೆ. ಆಮೇಲೆ ಗುರುದ್ವಾರ ಬಿಟ್ಟು ಬಾಡಿಗೆ ಮನೆ ಮಾಡಿಕೊಂಡೆ. ವಾರಕ್ಕೊಮ್ಮೆ ಗುರುದ್ವಾರಕ್ಕೆ ಹೋಗಿ ಗುರುಗ್ರಂಥ ಸಾಹಿಬಾ ಓದಿ ಬರುತ್ತಿದ್ದೆ."

"ಗ್ರೇಟ್ ಸರ್ ನೀವು. ನಿಮ್ಮನ್ನು ನೋಡಿ ಬದುಕುವುದನ್ನು ಕಲಿಯಬೇಕು."

"ಜಂಟಲ್‌ಮ್ಯಾನ್, ಅದೃಷ್ಟ ಒಲಿಯುವುದು ಪ್ರಯತ್ನಶೀಲರಿಗೆ ಮಾತ್ರ. ಆ ದಿನಗಳಲ್ಲಿ ನನಗೆ ಡಾ. ವಂದನಾ ಕೌರ್‌ಳ ಪರಿಚಯವಾಯಿತು. ಅವಳು ಅಲೋಪತಿ ಗೈನಕಾಲಜಿಸ್ಟ್. ಆಗ ನಾನು ಹೋಮಿಯೋಪತಿ ಡಾಕ್ಟರನಾಗಿ ಪ್ರಾಕ್ಟೀಸು ಮಾಡುತ್ತಿದ್ದೆ. ಅವಳು ನನ್ನನ್ನು ಅಲೋಪತಿ ಡಾಕ್ಟರರೆಂದೇ ಭಾವಿಸಿ ಮದುವೆಯ ಪ್ರಸ್ತಾಪ ಮುಂದಿಟ್ಟಳು. ನಾನು ಬಯಸದೆ ಬಂದ ಭಾಗ್ಯವದು. ಮದುವೆ ಸರಳವಾಗಿ ನಡೆಯಿತು. ಒಂದೇ ವಾರದಲ್ಲಿ ನಾನು ಹೋಮಿಯೋಪತಿ ವೈದ್ಯನೆಂಬ ಸತ್ಯ ಗೊತ್ತಾಗಿ ವಾದಕ್ಕಿಳಿದಳು. ಡಿವೋರ್ಸಿಗೆ ಅರ್ಜಿ ಹಾಕುತ್ತೇನೆ ಎಂದು ಕ್ರೋಧೋನ್ಮತ್ತಳಾದಳು. ಅದಕ್ಕೆ ನಾನು – ಇದನ್ನೆಲ್ಲಾ ನೀನು ವಿವಾಹ ಪೂರ್ವದಲ್ಲಿ ಕೇಳಬೇಕಿತ್ತು. ಕಸ್ಟಮ್ಸ್ ಅಧಿಕಾರಿಯಾಗಿ ನನಗೆ ಒಳ್ಳೆಯ ಸಂಬಳವಿದೆ. ನಾನೊಬ್ಬ ಸಂಭಾವಿತ. ಇಷ್ಟು ನಿನಗೆ ಸಾಲದೇ? – ಎಂದು ಅವಳ ಬಾಯಿ ಮುಚ್ಚಿಸಿದೆ. ನಮಗೊಬ್ಬಳು ಮಗಳು ಹುಟ್ಟಿದಳು. ಆಗ ನನಗೆ ಸಮಾಧಾನವಾಯಿತು, ಇನ್ನಿವಳು ಡಿವೋರ್ಸು ಕೊಡಲಾರಳೆಂದು."

ಒಂದು ಕ್ಷಣ ಡಾ. ಸೋನಿಪತ್ ಮಾತು ನಿಲ್ಲಿಸಿದರು. ನನಗೋ ತೀರದ ಕುತೂಹಲ.

"ಮುಂದೇನಾಯಿತು ಸರ್ ?"

"ತಾಳ್ಮೆ ಇರಲಿ ಜಂಟಲ್‌ಮ್ಯಾನ್. ನಿಧಾನವಾಗಿ ಹೇಳುತ್ತೇನೆ."

ನಾನು ಆಗಲಿ ಎಂಬಂತೆ ತಲೆಯಲ್ಲಾಡಿಸಿದೆ.

"ಮಗು ಹುಟ್ಟಿ ನಲವತ್ತನೆಯ ದಿವಸಕ್ಕೆ ಹೆಸರಿಡುವುದು ಸಂಪ್ರದಾಯವಂತೆ. ನನಗದೆಲ್ಲಾ ಗೊತ್ತಿರಲಿಲ್ಲ. ಅಂದು ಅವಳ ಸ್ನೇಹಿತೆಯರು ಬಂದು ನಾಮಕರಣ ಮಾಡಿದರು – ಶೀಲಾ ಸೋನಿಪತ್ ಎಂದು. ಆದರೆ, ಅಂದು ರಾತ್ರಿ ನನ್ನ ಮಡದಿ ಜಗಳಕ್ಕಿಳಿದಳು. ಮಗುವಿನ ನಾಮಕರಣ ಯಾವಾಗ ಎಂದು ಗೊತ್ತಿಲ್ಲದ ನೀವು ಜನ್ಮತಾ ಸಿಖ್ಖರಲ್ಲ. ನಿಜ ಹೇಳಿ, ನೀವು ಯಾರು? – ಅವಳ ಆರ್ಭಟಕ್ಕೆ ಹೆದರಿ ನಾನು ನಿಜ ಒಪ್ಪಿಕೊಂಡೆ. ಅವಳು ಕೆರಳಿ ಕೆಂಡವಾಗಿ – ನಿಮ್ಮಿಂದ ನನಗೆ ಮೋಸವಾಗಿದೆ. ಇನ್ನು ನಾನು ಸಹಿಸಲು ಸಾಧ್ಯವಿಲ್ಲ. ಯು.ಎಸ್.ನಲ್ಲಿ ನನ್ನ ಅಣ್ಣ ಇದ್ದಾನೆ. ನಿಮಗೆ ಡಿವೋರ್ಸು ಕೊಟ್ಟು ಅಲ್ಲಿಗೆ ಹೋಗಿ ಬಿಡುತ್ತೇನೆ. ಎಂದು ಹೇಳಿಬಿಟ್ಟಳು.''

"ಡಿವೋರ್ಸು ಕೊಟ್ಟೆ ಬಿಟ್ರಾ ಸರ್?"

"ಇಲ್ಲಿ ಕೇಳು ಜಂಟಲ್‌ಮ್ಯಾನ್. ನಾನು ಸಿಡಿಮಿಡಿಗೊಳ್ಳಲಿಲ್ಲ. – ಜೀವನದಲ್ಲಿ ಸುಖ ಶಾಂತಿ ಇರುವುದು ಹೊಂದಾಣಿಕೆಯಲ್ಲಿಯೇ ಹೊರತು ಜಾತಿ, ಧರ್ಮಗಳಲ್ಲಿ ಅಲ್ಲ. ನಮ್ಮ ಎರಡು ವರ್ಷದ ಸಂಸಾರದಲ್ಲಿ ನೀನು ಎಷ್ಟು ಬಾರಿ ಜಗಳವಾಡಿರಲಿಕ್ಕಿಲ್ಲ? ನಾನು ಒಮ್ಮೆಯಾದರೂ ನಿನ್ನನ್ನು ಬೈದದ್ದುಂಟಾ? ಜಗಳ ಮಾಡಿದ್ದುಂಟಾ? ನನಗೆ ಎಳವೆಯಲ್ಲೇ ಸಿಖ್ ಧರ್ಮದ ಬಗ್ಗೆ ಆಸಕ್ತಿ.